# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 03.05.2019 ರಂದು ಬೆಳಿಗ್ಗೆ 12.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಡಿ.ಶಿವಲಿಂಗಯ್ಯರವರ ಅಧ್ಯಕ್ಷತೆಯಲ್ಲಿ ನಡೆದ 51ನೇ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎಂ.ಎಸ್. ರಮಾನಂದ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ॥ ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ವಿಭಾಗ ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು - ಅನುಪಸ್ಥಿತರು | |
| **ವಿಶೇಷ ಆಹ್ವಾನಿತರು** | |
| **ಡಾ. ಪ್ರಕಾಶ್,**<br>ನಿರ್ದೇಶಕರು – ಐ.ಟಿ. | **ಡಾ. ಶಲ್ವಪಿಳ್ಳೈ ಅಯ್ಯಂಗಾರ್,**<br>ನಿರ್ದೇಶಕರು (ಪ್ರವೇಶಾತಿ) |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ : 51:01**

**ವಿಷಯ** : 2019-20ನೇ ಸಾಲಿನ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ಅನುಮೋದಿಸುವ ಬಗೆಗೆ.

*****

2019-20 ನೇ ಸಾಲಿನಲ್ಲಿ ಪ್ರವೇಶಾತಿಯನ್ನು ಪ್ರಾರಂಭಿಸುವ ಸಲುವಾಗಿ UGC ಯಿಂದ ಮಾನ್ಯತೆ ಪಡೆದಿರುವ ಈ ಕೆಳಕಂಡ ಕೋರ್ಸ್‌ಗಳಿಗೆ ಡೀನ್ (ಶೈ) ರವರ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಯಲ್ಲಿ ಸಮಿತಿಯು ಕೈಗೊಂಡ ನಿರ್ಣಯದಂತೆ ಈ ಕೆಳಕಂಡ ಕೋರ್ಸ್‌ಗಳ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಲಾಗಿದೆ.

1. ಬಿ.ಎ/ ಬಿ.ಕಾಂ. ಮತ್ತು ಬಿ.ಲಿಬ್.ಐ.ಎಸ್ಸಿ
2. ಎಂ.ಎ/ ಎಂ.ಕಾಂ
3. ಎಂ.ಬಿ.ಎ
4. ಎಂ.ಎಸ್ಸಿ ಮತ್ತು ಎಂ.ಲಿಬ್.ಐ.ಎಸ್ಸಿ
5. ಪಿಜಿ ಡಿಪ್ಲೊಮ, ಡಿಪ್ಲೊಮ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳು

ಅ) ಪ್ರತಿಯೊಂದು ಕೋರ್ಸಿನ ಅರ್ಹತೆಯನ್ನು UGC ODL Regulation – 2017/ ಕರಾಮುವಿ ಅಧ್ಯಾದೇಶಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಆ) ವಿವರಣಾ ಪುಸ್ತಕದ ವಿವರಗಳನ್ನು ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರುಗಳಿಂದ ದೃಢೀಕರಿಸಲಾಗಿದೆ.

ಇ) ಸದರಿ ವಿವರಣಾ ಪುಸ್ತಕವನ್ನು ಮಾನ್ಯ ಕುಲಪತಿಗಳ ಅನುಮೋದನೆಯೊಡನೆ ವಿಶ್ವವಿದ್ಯಾನಿಲಯದ **ಅಂತರ್‌ಜಾಲ** (www.ksoumysore.karnataka.govt.in) ದಲ್ಲಿ ಅಪ್ಲೋಡ್ ಮಾಡಲಾಗುವುದು. ವಿವರಣಾ ಪುಸ್ತಕಗಳಲ್ಲಿನ ಅದರ ಮಾಹಿತಿಯಂತೆ ವಿದ್ಯಾರ್ಥಿಗಳು ಪ್ರವೇಶಾತಿಗಳಿಗೆ ಮುಂದಿನ ಕ್ರಮ ವಹಿಸಬೇಕಾಗುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಒಳಗೊಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲಾಗಿದ್ದು ಅನುಮೋದನೆ ಕೋರಿದೆ.

**ತೀರ್ಮಾನ : 2019-20ನೇ ಸಾಲಿನಲ್ಲಿ ಪ್ರಾರಂಭಿಸುವ ಬಿ.ಎ/ ಬಿ.ಕಾಂ, ಮತ್ತು ಬಿ.ಲಿಬ್.ಐ.ಎಸ್ಸಿ / ಎಂ.ಎ / ಎಂ.ಕಾಂ /ಎಂ.ಬಿ.ಎ / ಎಂ.ಎಸ್ಸಿ ಮತ್ತು ಎಂ.ಲಿಬ್.ಐ.ಎಸ್ಸಿ / ಪಿಜಿ ಡಿಪ್ಲೊಮ, ಡಿಪ್ಲೊಮ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ಅನುಮೋದಿಸಿತು.**

---

**ವಿಷಯ ಸಂಖ್ಯೆ** : 51:02

**ವಿಷಯ** : 2018-19ನೇ ಸಾಲಿನ ಎಂ.ಬಿ.ಎ ಸಂಪರ್ಕ ಕಾರ್ಯಕ್ರಮವನ್ನು ಆಯೋಜಿಸುವ ಬಗೆಗಿನ ಸಭಾ ನಡಾವಳಿ ಅನುಮೋದಿಸುವ ಬಗ್ಗೆ.

*****

ಯು.ಜಿ.ಸಿಯ 2017ರ ದೂರ ಶಿಕ್ಷಣ ನಿಯಮಗಳ ಪ್ರಕಾರ ಎಂ.ಬಿ.ಎ ಸಂಪರ್ಕ ಕಾರ್ಯಕ್ರಮವನ್ನು ನಿಖರವಾಗಿ ವ್ಯವಸ್ಥೆ ಮಾಡಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ನಡೆಸುತ್ತಿರುವ ಎಂ.ಬಿ.ಎ ಕೋರ್ಸ್‌ನ ಸಂಪರ್ಕ ಕಾರ್ಯಕ್ರಮವು ಕರಾಮುವಿಯ ಅಧ್ಯಯನ ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಸಂಪರ್ಕ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸುವ ದೃಷ್ಟಿಯಿಂದ ಮಾನ್ಯ ಕುಲಪತಿಗಳು ಡೀನ್ (ಶೈಕ್ಷಣಿಕ) ರವರ ನೇತೃತ್ವದಲ್ಲಿ ಸಮಿತಿ ರಚಿಸಿದ್ದರು. ಸಮಿತಿಯು ದಿನಾಂಕ: 17.12.2018 ರಂದು ಸಭೆ ನಡೆಸಿ, ವಿಷಯವನ್ನು ಸಮಗ್ರವಾಗಿ ಚರ್ಚಿಸಿ ನಡಾವಳಿಯನ್ನು ಸಲ್ಲಿಸಿತ್ತು. ಈ ನಡಾವಳಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗಾಗಿ ಕೋರಲಾಗಿದೆ.

ಕುಲಸಚಿವರು ಕುಲಪತಿಗಳು

**ತೀರ್ಮಾನ : ಎಂ.ಬಿ.ಎ. ಕೋರ್ಸಿನ ಸಂಪರ್ಕ ಕಾರ್ಯಕ್ರಮ/ಸಮಾಲೋಚನೆಯನ್ನು ಯುಜಿಸಿ ದೂರಶಿಕ್ಷಣ ನಿಯಮಾವಳಿ 2017ರ ಪ್ರಕಾರ ನಡೆಸಲು ಸಮಿತಿಯ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿತು.**

---

**ವಿಷಯ ಸಂಖ್ಯೆ : 51:03**

**ವಿಷಯ :** ಪಿಹೆಚ್.ಡಿ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸುವ SC/ST/Cat-I ಅಭ್ಯರ್ಥಿಗಳಿಗೆ ಪ್ರವೇಶಾತಿ ಸಂಸ್ಕರಣಾ ಶುಲ್ಕದಲ್ಲಿ ರಿಯಾಯಿತಿಯನ್ನು ನೀಡಿರುವುದನ್ನು ಅನುಮೋದಿಸುವ ಕೋರಿ.

*****

ಕರಾಮುವಿಯ ಪಿಹೆಚ್.ಡಿ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸುವ SC/ST/Cat-I ಅಭ್ಯರ್ಥಿಗಳಿಗೆ ಪ್ರವೇಶಾತಿ ಸಂಸ್ಕರಣಾ ಶುಲ್ಕದಲ್ಲಿ ರಿಯಾಯಿತಿಯನ್ನು ನಿಯಮವಳಿಗಳ ಅನ್ವಯ ನೀಡುವುದಕ್ಕೆ ಮಾನ್ಯ ಕುಲಪತಿಗಳು ದಿನಾಂಕ: 21.03.2019 ರಂದು ಅನುಷ್ಠಾನಗೊಳಿಸುವಂತೆ ಒಪ್ಪಿಗೆ ನೀಡಿರುತ್ತಾರೆ. ಸದರಿ ವಿಷಯವನ್ನು ಅನುಸಮರ್ಥನೆಗಾಗಿ ಕೋರಿದೆ.

**ತೀರ್ಮಾನ : ಪಿಹೆಚ್.ಡಿ ಕಾರ್ಯಕ್ರಮಕ್ಕೆ SC/ST/Cat-I ಅಭ್ಯರ್ಥಿಗಳಿಗೆ ಪ್ರವೇಶಾತಿ ಸಂಸ್ಕರಣ ಶುಲ್ಕದಲ್ಲಿ ರಿಯಾಯಿತಿ ನೀಡಿರುವುದಕ್ಕೆ ಅನುಸಮರ್ಥನೆ ನೀಡಲಾಯಿತು.**

---

**ವಿಷಯ ಸಂಖ್ಯೆ : 51:04**

**ವಿಷಯ :** 14 ಅಧ್ಯಾಪಕರುಗಳ ಪಿಹೆಚ್.ಡಿ ಕೋರ್ಸಿಗೆ ಮಾರ್ಗದರ್ಶಕರಾಗಿ ಮಾನ್ಯತೆ ನೀಡಲು ಸಲ್ಲಿಸಿರುವ ಮನವಿ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಮಾರ್ಗದರ್ಶನಕ್ಕಾಗಿ ಅರ್ಹ ಅಧ್ಯಾಪಕರಿಂದ ಅರ್ಜಿಯನ್ನು ಅಹ್ವಾನಿಸಲಾಗಿತ್ತು. ಅರ್ಜಿಸಲ್ಲಿಸಿದವರಲ್ಲಿ 24 ಮಂದಿ ಅಧ್ಯಾಪಕರುಗಳಿಗೆ ಪಿಹೆಚ್.ಡಿ ಮಾರ್ಗದರ್ಶಕರೆಂದು ದಿನಾಂಕ: 08-03-2019 ರಂದು ಆದೇಶ ನೀಡಲಾಗಿದೆ. ದಿನಾಂಕ: 05-03-2019ರ ವ್ಯವಸ್ಥಾಪನಾ ಮಂಡಳಿ ತೀರ್ಮಾನದಂತೆ 14 ಅಧ್ಯಾಪಕರುಗಳಿಗೆ ಪಿಹೆಚ್.ಡಿ ಮಾರ್ಗದರ್ಶಕರೆಂದು ಪರಿಗಣಿಸಿರುವುದಿಲ್ಲ **(ಅನುಬಂಧ-ಅ)**. ಈ 14 ಅಧ್ಯಾಪಕರುಗಳು ಮತ್ತೊಮ್ಮೆ ಮನವಿ ಪತ್ರ ಸಲ್ಲಿಸಿ, ತಮ್ಮನ್ನು ಪಿಹೆಚ್.ಡಿ ಮಾರ್ಗದರ್ಶಕರೆಂದು ಪರಿಗಣಿಸುವಂತೆ ವ್ಯವಸ್ಥಾಪನಾ ಮಂಡಳಿಯ ತೀರ್ಮಾನವನ್ನು ಕೋರಿರುತ್ತಾರೆ. ಕ್ರಮಸಂಖ್ಯೆ 9 ಮತ್ತು 10 ರಲ್ಲಿನ ಅಧ್ಯಾಪಕರುಗಳು ಮನವಿ ಸಲ್ಲಿಸಿದ್ದು, 9ರ ಸಂಬಂಧ ಪತ್ರಿಕೋದ್ಯಮ ವಿಭಾಗದವರು ಅಧ್ಯಯನ ಮಂಡಳಿ ಸಭೆ ನಡೆಸದಿರುವ ಕಾರಣ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲು ಅವಕಾಶವಿರುವುದಿಲ್ಲ. ಕ್ರಮ ಸಂಖ್ಯೆ 10ರ ಎಲ್. ಎಲ್. ಎಮ್ ಕೋರ್ಸಿಗೆ ಯು.ಜಿ.ಸಿ ಯಿಂದ ಮಾನ್ಯತೆ ದೊರೆತಿರುವುದಿಲ್ಲ ಆದ್ದರಿಂದ ಸದರಿ ವಿಷಯವನ್ನು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ.

ಕುಲಸಚಿವರು

ಕುಲಪತಿಗಳು 3/5

(ಅನುಬಂಧ–ಅ)

| ಕ್ರಮ ಸಂಖ್ಯೆ | ಹೆಸರು ಮತ್ತು ಹುದ್ದೆ | ವಿಭಾಗ | ಬಿ.ಓ.ಎಸ್. ಸಭೆಯಲ್ಲಿ ಶಿಫಾರಸ್ಸು ಮಾಡಿದ ದಿನಾಂಕ | ಅಭಿಪ್ರಾಯ |
|---|---|---|---|---|
| 1 | ಡಾ. ಹರ್ಷ.ಟಿ.ಎಸ್. ಸಹಾಯಕ ಪ್ರಾಧ್ಯಾಪಕರ | ಪರಿಸರ ವಿಜ್ಞಾನ ವಿಭಾಗ | 19.02.2019 | ಶಿಫಾರಸ್ಸು ಮಾಡಿದೆ |
| 2 | ಡಾ. ಪಿ. ಮಂಜುನಾಥ, ಸಹಾಯಕ ಪ್ರಾಧ್ಯಾಪಕರು, | ಮನೋವಿಜ್ಞಾನ ಅಧ್ಯಯನ ವಿಭಾಗ | 21.02.2019 | ಶಿಫಾರಸ್ಸು ಮಾಡಿದೆ |
| 3 | ಡಾ. ಚಂದ್ರಶೇಖರ. ವೈ.ಪಿ ಸಹಾಯಕ ಪ್ರಾಧ್ಯಾಪಕರು, | ಭೂಗೋಳಶಾಸ್ತ್ರ ವಿಭಾಗ | 21.02.2019 | ಶಿಫಾರಸ್ಸು ಮಾಡಿದೆ |
| 4 | ಡಾ. ಜ್ಯೋತಿ ಶಂಕರ್, ಸಹಾಯಕ ಪ್ರಾಧ್ಯಾಪಕರು, | ಕನ್ನಡ ಅಧ್ಯಯನ ವಿಭಾಗ | 01.03.2019 | ಶಿಫಾರಸ್ಸು ಮಾಡಿದೆ |
| 5 | ಡಾ. ಎಂ. ಮಹೇಶ, ಸಹಾಯಕ ಪ್ರಾಧ್ಯಾಪಕರು, | ಕಂಪ್ಯೂಟರ್ ಸೈನ್ಸ್ ವಿಭಾಗ | 19.02.2019 | ಶಿಫಾರಸ್ಸು ಮಾಡಿದೆ |
| 6 | ಡಾ.ಸುಮತಿ ರಾಮಕೃಷ್ಣೇಗೌಡ, ಸಹಾಯಕ ಪ್ರಾಧ್ಯಾಪಕರು, | ಕಂಪ್ಯೂಟರ್ ಸೈನ್ಸ್ ವಿಭಾಗ | 19.02.2019 | ಶಿಫಾರಸ್ಸು ಮಾಡಿದೆ |
| 7 | ಡಾ. ಅನಿತ.ಸಿ, ಸಹಾಯಕ ಪ್ರಾಧ್ಯಾಪಕರು, | ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗ | 21.02.2019 | ಶಿಫಾರಸ್ಸು ಮಾಡಿದೆ |
| 8 | ಡಾ. ವೀರೇಂದ್ರ ಕುಮಾರ್, ಸಹಾಯಕ ಪ್ರಾಧ್ಯಾಪಕರು, | ಅರ್ಥಶಾಸ್ತ್ರ ವಿಭಾಗ | 23.02.2019 | ಶಿಫಾರಸ್ಸು ಮಾಡಿದೆ |
| 9 | ಡಾ. ಶೈಲೇಶ್ ರಾಜ್ ಅರಸ್ ಸಹಾಯಕ ಪ್ರಾಧ್ಯಾಪಕರು | ಪತ್ರಿಕೋದ್ಯಮ ವಿಭಾಗ | ಬಿ.ಓ.ಎಸ್ ಸಭೆ ನಡೆಸಿರುವುದಿಲ್ಲ | |
| 10 | ಡಾ ಜಾಹ್ನವಿ ಸಹಾಯಕ ಪ್ರಾಧ್ಯಾಪಕರು | ಕಾನೂನು ವಿಭಾಗ | ಎಲ್ ಎಲ್ ಎಮ್ ಕೋರ್ಸ್ ಇಲ್ಲದ ಕಾರಣ ಬಿ.ಓ.ಎಸ್. ಸಭೆ ನಡೆಸಿರುವುದಿಲ್ಲ | |
| 11 | ಡಾ ಸುಜಾತ ಸಹಾಯಕ ಪ್ರಾಧ್ಯಾಪಕರು | ಇತಿಹಾಸ ವಿಭಾಗ | 02.03.2019 | ಶಿಫಾರಸ್ಸು ಮಾಡಿದೆ |
| 12 | ಡಾ ರಾಮೇಗೌಡ ಸಹಾಯಕ ಪ್ರಾಧ್ಯಾಪಕರು | ಇತಿಹಾಸ ವಿಭಾಗ | 02.03.2019 | ಶಿಫಾರಸ್ಸು ಮಾಡಿದೆ |
| 13 | ಡಾ ಬನಶಂಕರಿ ಸಹಾಯಕ ಪ್ರಾಧ್ಯಾಪಕರು | ಅರ್ಥಶಾಸ್ತ್ರ ವಿಭಾಗ | 23.02.2019 | ಶಿಫಾರಸ್ಸು ಮಾಡಿದೆ |
| 14 | ಡಾ ಕೃಷ್ಣಪ್ಪ.ಜಿ. ನಿಂಬಕ್ಕನವರ ಸಹಾಯಕ ಪ್ರಾಧ್ಯಾಪಕರು | ರಾಜ್ಯಶಾಸ್ತ್ರ ವಿಭಾಗ | 19.02.2019 | ಶಿಫಾರಸ್ಸು ಮಾಡಿದೆ |

ತೀರ್ಮಾನ : ಎಲ್.ಎಲ್.ಎಂ. ಕೋರ್ಸ್‌ಗೆ ಯುಜಿಸಿಯಿಂದ ಮಾನ್ಯತೆ ಈವರೆವಿಗೆ ಲಭ್ಯವಿಲ್ಲ ಎಂಬುದನ್ನು ಗಮನಿಸಿ, ಇನ್ನುಳಿದ ಅಧ್ಯಾಪಕರುಗಳ ಮನವಿಯನ್ನು ಶೈಕ್ಷಣಿಕ ಮಂಡಳಿ ಪರಿಗಣಿಸುತ್ತಾ, ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲು ಶಿಫಾರಸ್ಸು ಮಾಡಿತು ಮುಂದುವರೆದು ಸದರಿ ಅಧ್ಯಾಪಕರುಗಳಿಗೆ ಈಗ ಅಧಿಸೂಚನೆ ಹೊರಡಿಸಿರುವ ಪಿ.ಎಚ್‌ಡಿ ಪ್ರವೇಶಾತಿಯಲ್ಲಿ ಪರಿಗಣಿಸುವ ಸಂಬಂಧದ ತೀರ್ಮಾನವನ್ನು ವ್ಯವ್ಥಾಪನ ಮಂಡಳಿಯಲ್ಲಿ ತೆಗೆದುಕೊಳ್ಳಲು ನಿರ್ಣಯಿಸಿತು.

---

ಕುಲಸಚಿವರು

ಕುಲಪತಿಗಳು 3/5

**ವಿಷಯ ಸಂಖ್ಯೆ : 51:05**

**ವಿಷಯ** : 2018-19ನೇ ಸಾಲಿನ ಬಿ.ಇಡಿ ಸಂಪರ್ಕ ಕಾರ್ಯಕ್ರಮ ಮತ್ತು ವಾರಾಂತ್ಯ ಸಮಾಲೋಚನಾ ತರಗತಿಗಳನ್ನು ಆಯೋಜಿಸುವ ಬಗೆಗಿನ ಸಭಾ ನಡಾವಳಿ ಅನುಮೋದಿಸುವ ಬಗ್ಗೆ.

*****

2017ರ ದೂರ ಶಿಕ್ಷಣ ನಿಯಮಗಳ ಪ್ರಕಾರ ಯು.ಜಿ.ಸಿ.ಯು ಬಿ.ಇಡಿ ಸಂಪರ್ಕ ಕಾರ್ಯಕ್ರಮ ಮತ್ತು ವಾರಾಂತ್ಯ ಸಮಾಲೋಚನಾ ಕಾರ್ಯಕ್ರಮಗಳನ್ನು ನಿಖರವಾಗಿ ವ್ಯವಸ್ಥೆ ಮಾಡಬೇಕೆಂದು ತಿಳಿಸಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ನಡೆಸುತ್ತಿರುವ ಬಿ.ಇಡಿ ಕೋರ್ಸ್‌ನ ಸಂಪರ್ಕ ಕಾರ್ಯಕ್ರಮ ಹಾಗೂ ವಾರಾಂತ್ಯ ಸಮಾಲೋಚನಾ ಕಾರ್ಯಕ್ರಮಗಳನ್ನು ಕರಾಮುವಿಯ ಬಿ.ಇಡಿ ಕೋರ್ಸ್‌ನ ಅಧ್ಯಯನ ಕೇಂದ್ರಗಳು ನಡೆಸುತ್ತವೆ. ಸಂಪರ್ಕ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸುವ ದೃಷ್ಟಿಯಿಂದ ಮಾನ್ಯ ಕುಲಪತಿಗಳು ಡೀನ್ (ಶೈಕ್ಷಣಿಕ) ರವರ ನೇತೃತ್ವದಲ್ಲಿ ಸಮಿತಿಯು ರಚಿಸಿದ್ದರು. ಸಮಿತಿಯು ದಿನಾಂಕ: 05.02.2019 ರಂದು ಸಭೆ ನಡೆಸಿ ವಿಷಯವನ್ನು ಸಮಗ್ರವಾಗಿ ಚರ್ಚಿಸಿ, ನಡಾವಳಿಯನ್ನು ಸಲ್ಲಿಸಿತ್ತು. ಈ ನಡಾವಳಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ : ಕರಾಮುವಿಯು ಎನ್.ಸಿ.ಟಿ.ಇ. ನಿಯಮದ ಪ್ರಕಾರ ಬಿ.ಇಡಿ. ಸಂಪರ್ಕ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಅಂಗೀಕೃತ ಅಧ್ಯಯನ ಕೇಂದ್ರಗಳಲ್ಲಿ ನಡೆಸುವ ಸಲುವಾಗಿ ಸಮಿತಿಯು ಶಿಫಾರಸ್ಸು ಮಾಡಿದ್ದು, ಇದರ ನಡಾವಳಿಯನ್ನು ಅನುಮೋದಿಸಿತು.**

---

**ವಿಷಯ ಸಂಖ್ಯೆ : 51:06**

**ವಿಷಯ** : ವಿಶ್ವವಿದ್ಯಾನಿಲಯದ ಆಂತರಿಕ ಶಿಕ್ಷಣಕ್ರಮದ (ಇನ್‌ಹೌಸ್ ಶಿಕ್ಷಣಕ್ರಮ) ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳನ್ನು ವಿತರಿಸುವ ಸಂಬಂಧ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಲು ಸಮಿತಿಯ ಶಿಫಾರಸ್ಸುಗಳ ಕುರಿತು.

*****

ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಆಂತರಿಕ ಶಿಕ್ಷಣಕ್ರಮಗಳ (ಇನ್‌ಹೌಸ್ ಶಿಕ್ಷಣಕ್ರಮ) ವಿದ್ಯಾರ್ಥಿಗಳು ಅಂಕಪಟ್ಟಿ ಮತ್ತು ವಿವಿಧ ಪ್ರಮಾಣ ಪತ್ರಗಳನ್ನು ಕೋರಿ ಅರ್ಜಿ ಸಲ್ಲಿಸಿದ್ದು, ದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ವಿದ್ಯಾರ್ಥಿಗಳ ಅಂಕಪಟ್ಟಿಯ ಅಂಕಗಳು, ಲೆಡ್ಜರ್ ಮತ್ತು ಮೂಲ ದಾಖಲೆಗಳಲ್ಲಿ ವ್ಯತ್ಯಾಸ, ಇತ್ಯಾದಿ ನ್ಯೂನತೆ ಕಂಡು ಬಂದಿರುತ್ತದೆ. ಇವುಗಳನ್ನು ಪರಿಹರಿಸಲು ಆದೇಶ ಸಂಖ್ಯೆ:ಕರಾಮುವಿ/ಆವಿ/ಕಾನಿ/ಎಸ್.ಆರ್.10/18-19, ದಿನಾಂಕ: 21-03-2019ರ ಪ್ರಕಾರ ಸಮಿತಿಯನ್ನು ರಚಿಸಲಾಗಿರುತ್ತದೆ.

ಸದರಿ ಸಮಿತಿಯು ದಿನಾಂಕ: 29-03-2019 ರಂದು ಡೀನ್ (ಶೈಕ್ಷಣಿಕ)ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಎಂ.ಬಿ.ಎ. ಮತ್ತು ಬಿ.ಎ. ಶಿಕ್ಷಣಕ್ರಮಗಳ ಒಟ್ಟು 05 ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪ್ರಮಾಣಪತ್ರ ವಿತರಣೆಗೆ ಇರುವ ನ್ಯೂನತೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ನ್ಯೂನತೆಗಳನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಕೆಲವು ಶಿಫಾರಸ್ಸುಗಳನ್ನು ಸಮಿತಿ ಸಭೆಯು ನಡಾವಳಿ ರೂಪದಲ್ಲಿ ಸಲ್ಲಿಸಿರುತ್ತದೆ. (ಪ್ರತಿ ಲಗತ್ತಿಸಿದೆ)

ಸದರಿ ಸಮಿತಿಯ ನಡಾವಳಿಯಲ್ಲಿನ ಶಿಫಾರಸ್ಸುಗಳನ್ನೊಳಗೊಂಡ ಅಂಶಗಳನ್ನು ಅನುಷ್ಠಾನಗೊಳಿಸುವ ಸಂಬಂಧವಾಗಿ 51ನೇಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಕುಲಸಚಿವರು | ಕುಲಪತಿಗಳು 3/5

ತೀರ್ಮಾನ : ವಿಶ್ವವಿದ್ಯಾನಿಲಯದ ಆಂತರಿಕ ಶಿಕ್ಷಣಕ್ರಮದ (ಇನ್‌ಹೌಸ್ ಶಿಕ್ಷಣಕ್ರಮ) ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳನ್ನು ವಿತರಿಸುವ ಸಂಬಂಧ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಲು ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

---

**ವಿಷಯ ಸಂಖ್ಯೆ : 51:07**

**ವಿಷಯ :** ಪಿಹೆಚ್.ಡಿ. ಅಧ್ಯಾದೇಶ – 2012 ಮತ್ತು ಅದರ ಹಿಂದೆ ಸಂಶೋಧನೆ ಮಾಡುತ್ತಿದ್ದ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅಧ್ಯಯನ ಮಾಡಲು ಸಮಿತಿ ಸಲ್ಲಿಸಿರುವ ನಡವಳಿ ಕುರಿತು.

*****

ಪಿಹೆಚ್.ಡಿ ರೆಗ್ಯೂಲೇಷನ್–2008ರ ಪ್ರಕಾರ ವಿದ್ಯಾರ್ಥಿಗಳು ನೋಂದಣಿಯಾಗಿದ್ದು ಇವರುಗಳ ಪಿಹೆಚ್.ಡಿ ಸಂಶೋಧನೆ ಮಾಡುವಾಗ ಪಿಹೆಚ್.ಡಿ ರೆಗ್ಯೂಲೇಷನ್–2012 ಜಾರಿಗೆ ಬಂದಿರುತ್ತದೆ. ಸದರಿ ರೆಗ್ಯೂಲೇಷನ್ ಜಾರಿಗೆ ಬಂದ ಸಂದರ್ಭದಲ್ಲಿ ದಿನಾಂಕ: 01–10–2012 ರಂದು ಡೀನ್ (ಶೈಕ್ಷಣಿಕ) ವಿಭಾಗದಿಂದ ಹೊರಡಿಸಿರುವ ಸುತ್ತೋಲೆ (KSOU/Dean(Academic) 07/2012–13, Dated: 01–10–2012)ರಲ್ಲಿ ತಿಳಿಸಿರುವಂತೆ, ಸಂಶೋಧನೆ ಮಾಡುತ್ತಿರುವ ಕೆಲವು ವಿದ್ಯಾರ್ಥಿಗಳು ಪಿಹೆಚ್.ಡಿ ಕೋರ್ಸ್‌ವರ್ಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಕೆಲವು ವಿದ್ಯಾರ್ಥಿಗಳಿಗೆ ಕೋರ್ಸ್‌ವರ್ಕ್ ತರಗತಿಗಳಿಗೆ ಹಾಜರಾಗಿ ಪರೀಕ್ಷೆ ಬರೆಯಲು ಕಾಯುತ್ತಿದ್ದು, ಹಾಗೂ ಪಿಹೆಚ್.ಡಿ ರೆಗ್ಯೂಲೇಷನ್–2012ರ ಪ್ರಕಾರ ಪ್ರವೇಶ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆ ಮೂಲಕ ಪಿಹೆಚ್.ಡಿ ಕಾರ್ಯಕ್ರಮಕ್ಕೆ ತಾತ್ಕಾಲಿಕವಾಗಿ ನೋಂದಣಿಯಾಗಿ ವಿದ್ಯಾರ್ಥಿಗಳು ಕೋರ್ಸ್‌ವರ್ಕ್ ತರಗತಿಗಳಿಗೆ ಹಾಜರಾಗಿ ಕೋರ್ಸ್‌ವರ್ಕ್ ಪರೀಕ್ಷೆ ಬರೆದಿರುವುದಿಲ್ಲ. ಇಂತಹ ವಿದ್ಯಾರ್ಥಿಗಳು ಸಂಶೋಧನಾ ಕಾರ್ಯವನ್ನು ಮುಂದುವರೆಸಲು ಕೋರಿರುತ್ತಾರೆ.

ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳ ಸಂಶೋಧನಾ ಕಾರ್ಯ ಯಾವ ಹಂತದಲ್ಲಿ ಸ್ಥಗಿತಗೊಂಡಿದೆ ಎಂಬುವುದರ ಬಗೆಗೆ ವರದಿ ಪಡೆಯಲು ಆದೇಶ ಸಂಖ್ಯೆ: ಕರಾಮುವಿ/ಪವಿ/ಪಿಹೆಚ್.ಡಿ/ 2018–19 ದಿನಾಂಕ: 19–03–2019ರ ಪ್ರಕಾರ ಮಾನ್ಯ ಕುಲಪತಿಗಳ ಸೂಚನೆ ಅನುಸಾರ ಸಮಿತಿಯನ್ನು ಡೀನ್ (ಶೈಕ್ಷಣಿಕ) ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು.

ಕರಾಮುವಿ ಪಿಹೆಚ್.ಡಿ. ಆದ್ಯಾಧೇಶ 2012ರ ಪ್ರಕಾರ 65 ವಿದ್ಯಾರ್ಥಿಗಳು ಪಿಹಚ್.ಡಿ ವಿವಿಧ ಹಂತಗಳಲ್ಲಿ ನೋಂದಣಿಯಾಗಿದ್ದು ಅವರುಗಳ ಸಂಶೋಧನಾ ಕಾರ್ಯವು ವಿವಿಧ ಹಂತದಲ್ಲಿದ್ದು, ವಿಶ್ವವಿದ್ಯಾನಿಲಯದ ಮಾನ್ಯತೆ ಸಮಸ್ಯೆಯಿಂದ ಸ್ಥಗಿತಗೊಂಡಿರುತ್ತದೆ. ಈ ವಿಷಯವನ್ನು ಸಮಿತಿ ಸಂಪೂರ್ಣವಾಗಿ ಗಮನಿಸಿ ಸ್ಥಗಿತಗೊಂಡಿರುವ ಅವರುಗಳ ಸಂಶೋಧನಾ ಕಾರ್ಯವನ್ನು ಮುಂದುವರೆಸಲು ಶಿಫಾರಸ್ಸುಮಾಡಿತು.

66 ಸಂಶೋಧನಾ ವಿದ್ಯಾರ್ಥಿಗಳು ಹಿಂದಿನ (2012 ಕ್ಕಿಂತಲೂ ಮೊದಲು) ಪಿಹೆಚ್.ಡಿ ನಿಯಮಾವಳಿ ಪ್ರಕಾರ ನೋಂದಣಿಮಾಡಿಕೊಂಡಿರುತ್ತಾರೆ. ಇವರುಗಳ ಸಂಶೋಧನಾ ಪ್ರಗತಿ ಉತ್ತಮವಾಗಿದೆ ಎಂಬುದನ್ನು ಗಮನಿಸಿ, ಅವರುಗಳ ಸಂಶೋಧನಾ ಕಾರ್ಯವನ್ನು ಉತ್ತೇಜಿಸಲು ಉಳಿದ ಹಂತಗಳನ್ನು ಮುಕ್ತಾಯಗೊಳಿಸುವಂತ ಶಿಫಾರಸ್ಸುಮಾಡಿತು.

ಸದರಿ ಸಮಿತಿಯು ನೀಡಿರುವ ನಡವಳಿ ಮತ್ತು ಶಿಫಾರಸ್ಸು ಪ್ರತಿಗಳನ್ನು ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿದ್ದು, ಈ ಬಗ್ಗೆ ಅಗತ್ಯ ನಿರ್ದೇಶನ ಕೋರಿದೆ.

ಕುಲಸಚಿವರು

ಕುಲಪತಿಗಳು

ತೀರ್ಮಾನ : ಕರಾಮುವಿಯಲ್ಲಿ ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ ಕೋರ್ಸ್‌ಗಳನ್ನು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ರಚಿಸಿದ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

---

**ವಿಷಯ ಸಂಖ್ಯೆ : 51:08**

**ವಿಷಯ** : 2019-20ನೇ ಸಾಲಿಗೆ ಕರಾಮುವಿ ಕೇಂದ್ರ ಸ್ಥಾನ ಮೈಸೂರು ನಗರದಲ್ಲಿ ನೂತನವಾಗಿ ಎರಡು ಸಾಮಾನ್ಯ 'ಕಲಿಕಾರ್ಥಿ ಸಹಾಯ ಕೇಂದ್ರ (ಅಧ್ಯಯನ ಕೇಂದ್ರ)' ಸ್ಥಾಪನೆಗೆ ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆ ಕೋರಿ.

*****

ಮುಕ್ತ ಮತ್ತು ದೂರ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರುವ ನಮ್ಮ ವಿಶ್ವವಿದ್ಯಾನಿಲಯವು ಯು.ಜಿ.ಸಿ ಯ "ಮುಕ್ತ ಮತ್ತು ದೂರ ಶಿಕ್ಷಣ ಕಲಿಕೆ" ಯ ನಿಯಮಾವಳಿ-2017 ರ ಪ್ರಕಾರ, 'ಉನ್ನತ ಶಿಕ್ಷಣ ಎಲ್ಲರಿಗೆ ಎಲ್ಲೆಡೆ' ಎಂಬ ಧ್ಯೇಯ ವಾಕ್ಯದ ಅನುಸಾರ ಶಿಕ್ಷಣವನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ನೀಡಬೇಕಿರುತ್ತದೆ. 2019-20ರ ಶೈಕ್ಷಣಿಕ ವರ್ಷದಲ್ಲಿ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ಸಾಧ್ಯತೆಯಿರುವುದರಿಂದ, ಮೈಸೂರು ನಗರ ವ್ಯಾಪ್ತಿಯಲ್ಲಿ ಎರಡು ಕಾಲೇಜುಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಆದ್ದರಿಂದ, ಈ ಹಿಂದೆ ಕರಾಮುವಿ ಅಧ್ಯಯನ ಕೇಂದ್ರಗಳಾಗಿ ಕಾರ್ಯನಿರ್ವಹಿಸಿ ಅನುಭವವುಳ್ಳ,

1. **ಮರಿಮಲಪ್ಪ ಶಿಕ್ಷಣ ಸಂಸ್ಥೆ**
   ಸೀತಾವಿಲಾಸ, ರಸ್ತೆ, ಮೈಸೂರು-570024
2. **ಟಿ.ಟಿ.ಎಲ್ ಟ್ರಸ್ಟ್ (ರಿ)**
   ಸರಸ್ವತಿಪುರಂ, ಮೈಸೂರು-570009

ಈ ಮೇಲ್ಕಂಡ ಎರಡು ವಿದ್ಯಾಸಂಸ್ಥೆಗಳಲ್ಲಿ ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಪುನರ್ ಆರಂಭಿಸುವ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

ತೀರ್ಮಾನ: ಮೈಸೂರು ಕೇಂದ್ರದಲ್ಲಿ ಬಿ.ಎ./ಬಿ.ಕಾಂ. ಕೋರ್ಸ್‌ಗಳ ಸಮಾಲೋಚನಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸುವ ಸಲುವಾಗಿ ಟಿ.ಟಿ.ಎಲ್. ಟ್ರಸ್ಟ್, ಮೈಸೂರು ಮತ್ತು ಮರಿಮಲ್ಲಪ್ಪ ಶಿಕ್ಷಣ ಸಂಸ್ಥೆ, ಮೈಸೂರು ಈ ಎರಡು ಸಂಸ್ಥೆಗಳನ್ನು ಕರಾಮುವಿಯ ಅಧಿಕೃತ ಕಲಿಕಾರ್ಥಿ ಸಹಾಯಕ ಕೇಂದ್ರಗಳನ್ನಾಗಿ ಅನುಮೋದಿಸಿತು.

---

**ವಿಷಯ ಸಂಖ್ಯೆ : 51:09**

**ವಿಷಯ** : 2019-20ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಅಧಿಸೂಚನೆಯನ್ನು ಅನುಮೋದಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯದಲ್ಲಿ ಆನ್‌ಲೈನ್ ಮೂಲಕ ವಿವಿಧ ಕೋರ್ಸ್/ವಿಷಯಗಳಿಗೆ 2019-20ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಆಯಾ ಕೋರ್ಸ್‌ಗಳಿಗೆ ಸಂಬಂಧಿಸಿದ ವಿದ್ಯಾರ್ಹತೆ ಮತ್ತು ಶುಲ್ಕಗಳ ವಿವರ ಹಾಗೂ ಇತರೆ ವಿಷಯಗಳನ್ನು ಒಳಗೊಂಡ ಅಧಿಸೂಚನೆಯನ್ನು ಸಿದ್ಧಪಡಿಸಲಾಗಿದ್ದು, ಸದರಿ ಅಧಿಸೂಚನೆಯನ್ನು (ಪ್ರತಿ ಲಗತ್ತಿಸಿದೆ). ಶೈಕ್ಷಣಿಕ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ಕುಲಸಚಿವರು ಕುಲಪತಿಗಳು

ತೀರ್ಮಾನ 1: 2018-19 ಶೈಕ್ಷಣಿಕ ಸಾಲಿನಲ್ಲಿ ಕರಾಮುವಿಯ ವಿವಿಧ ಕೋರ್ಸ್‌ಗಳ ಪ್ರವೇಶಾತಿ ಅಧಿಸೂಚನೆ (ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮ) ಜಾಹೀರಾತು ಕರಡನ್ನು ಸಭೆ ಅನುಮೋದಿಸಿತು. ವಿಶ್ವವಿದ್ಯಾನಿಲಯದ ಪ್ರವೇಶಾತಿಯನ್ನು ಗಣನೀಯವಾಗಿ ಹೆಚ್ಚಿಸುವ ಹಿತದೃಷ್ಟಿಯಿಂದ ದಿನಪತ್ರಿಕೆಗಳು ಹಾಗೂ ದೂರದರ್ಶನ ಮಾಧ್ಯಮದಲ್ಲಿ ಜಾಹೀರಾತನ್ನು ಕಾಲಕಾಲಕ್ಕೆ ನೀಡುವುದು, ವಿವಿಧ ಪ್ರಾದೇಶಿಕ ಕೇಂದ್ರಗಳಲ್ಲಿ ಅಧಿಕಾರಿಗಳು ಕೋರ್ಸ್‌ಗಳ ಪರಿಚಯ/ ಸುದ್ದಿಗೋಷ್ಠಿ ಕಾರ್ಯಕ್ರಮಗಳನ್ನು ನಡೆಸಲು ಸಭೆ ಒಪ್ಪಿಗೆ ನೀಡಿತು.

ತೀರ್ಮಾನ 2: 2018-19ರಲ್ಲಿ ನಡೆದ ಪ್ರವೇಶಾತಿಯಲ್ಲಿ ಕೆಲವು ನ್ಯೂನತೆಗಳನ್ನು ಸಭೆ ಗಮನಿಸಿ, ಅವುಗಳನ್ನು ಸರಿದೂಗಿಸಲು ಮತ್ತು ವಿದ್ಯಾರ್ಥಿಗಳಿಗೆ ಕೋರ್ಸ್‌ಗಳ ಬಗ್ಗೆ ಪರಿಣಾಮಕಾರಿಯಾಗಿ ಸಮಾಲೋಚನೆ ನಡೆಸುವ ಸಲುವಾಗಿ ಮೈಸೂರು ಕೇಂದ್ರದಲ್ಲಿ ಬಿ.ಎ./ಬಿ.ಕಾಂ., ಪಿಜಿ ಡಿಪ್ಲಮೊ, ಡಿಪ್ಲಮೊ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶಾತಿಯನ್ನು ಕರಾಮುವಿ ಪ್ರವೇಶಾತಿ ವಿಭಾಗದ ನಿರ್ದೇಶಕರು ನಿರ್ವಹಿಸುವುದು. ಹಾಗೆಯೇ ಬಿ.ಲಿಬ್.ಸೈನ್ಸ್, ಎಂ.ಲಿಬ್.ಸೈನ್ಸ್, ಎಂ.ಎ./ಎಂ.ಕಾಂ., ಎಂ.ಎಸ್ಸಿ, ಎಂ.ಬಿ.ಎ. ಕೋರ್ಸ್‌ಗಳ ಪ್ರವೇಶಾತಿಯನ್ನು ಕರಾಮುವಿ, ಮೈಸೂರಿನ ಸಂಬಂಧಪಟ್ಟ ವಿಭಾಗಗಳ ಅಧ್ಯಕ್ಷರುಗಳು ಪ್ರವೇಶಾತಿಯ ಜವಾಬ್ದಾರಿ ಯನ್ನು ನಿರ್ವಹಿಸಲು ಅನುಮೋದನೆ ನೀಡಲಾಯಿತು. ಉಳಿದಂತೆ ಆಯಾ ಪ್ರಾದೇಶೀಕ ಕೇಂದ್ರಗಳಲ್ಲಿ ಎಲ್ಲಾ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆಯನ್ನು ನಡೆಸಲು ಅನುಮೋದಿಸಲಾಯಿತು.

---

ವಿಷಯ ಸಂಖ್ಯೆ : 51:10

ವಿಷಯ : ಕರಾಮುವಿಯಲ್ಲಿನ ಪಿ.ಜಿ ಡಿಪ್ಲೊಮ/ಡಿಪ್ಲೊಮ/ಸರ್ಟಿಫಿಕೇಟ್ ಕೋರ್ಸು ಗಳ ಪ್ರವೇಶಾತಿಗೆ ನೋಂದಣಿ ಶುಲ್ಕವನ್ನು ವಿದ್ಯಾರ್ಥಿಗಳು ಪಾವತಿಸಬೇಕಾಗುತ್ತದೆ. ಈ ನೋಂದಣಿ ಶುಲ್ಕದಿಂದ ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಪಡೆಯಲು ಹಾಗೂ ಪ್ರವೇಶಾತಿ ಗುರುತಿನ ಚೀಟಿ ಪಡೆಯಲು ಸಹಾಯಕಾರಿಯಾಗಿರುತ್ತದೆ. ಸದರಿ ಕೋರ್ಸುಗಳ ನೋಂದಣಿ ಶುಲ್ಕವು ಪಿ.ಜಿ ಡಿಪ್ಲೊಮ/ಡಿಪ್ಲೊಮ/ಸರ್ಟಿಫಿಕೇಟ್ ಕೋರ್ಸುಗಳ ಅಧ್ಯಾದೇಶದಲ್ಲಿ ಸೇರಿಲ್ಲದಿರುವುದರಿಂದ ಈ ಶುಲ್ಕವನ್ನು ಪ್ರವೇಶಾತಿ ಪ್ರಕ್ರಿಯೆಗೆ ಸೇರಿಸಬೇಕಾಗಿರುತ್ತದೆ. ಈ ಬಗ್ಗೆ ವಿಷಯವನ್ನು ಮಂಡಿಸಿದ್ದು, ನಿರ್ದೇಶನ ಕೋರಿದೆ.

ತೀರ್ಮಾನ : ಪಿ.ಜಿ ಡಿಪ್ಲೊಮ/ ಡಿಪ್ಲೊಮ/ ಸರ್ಟಿಫಿಕೇಟ್ ಕೋರ್ಸುಗಳ ನೋಂದಣಿ ಶುಲ್ಕ ರೂ. 300/- ಅನ್ನು ನಿಗದಿಪಡಿಸಿ ಅನುಮೋದಿಸಲಾಗಿದೆ.

---

ವಿಷಯ ಸಂಖ್ಯೆ : 51:11

ವಿಷಯ : ಕರಾಮುವಿಯಲ್ಲಿನ ತೆಲಗು ವಿಭಾಗದಲ್ಲಿ 2018-19ರಲ್ಲಿ ಬಿ.ಎ ಕೋರ್ಸಿನ ಪ್ರವೇಶಾತಿಯು ಶೂನ್ಯವಾಗಿದ್ದು, ಯಾವುದೇ ಶೈಕ್ಷಣಿಕ ಚಟುವಟಿಕೆಗಳು ಇಲ್ಲದಿರುವುದರಿಂದ ತೆಲಗು ವಿಭಾಗವನ್ನು ಸ್ಥಗಿತಗೊಳಿಸಿ, ಆ ವಿಭಾಗದ ಅಧ್ಯಕ್ಷರನ್ನು ವಿಶ್ವವಿದ್ಯಾನಿಲಯದ ಇನ್ನಿತರೆ ಶೈಕ್ಷಣಿಕ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಬೇಕಾಗುತ್ತದೆ. ವಿಭಾಗದಲ್ಲಿ ಶೂನ್ಯ ಪ್ರವೇಶಾತಿ ಇರುವುದರಿಂದ ಆ ವಿಭಾಗದ ನಿರ್ವಹಣೆಯಿಂದ ವಿಶ್ವವಿದ್ಯಾನಿಲಯದ ಮೇಲೆ ಆರ್ಥಿಕ ಹೊರೆಯಾಗುತ್ತಿದ್ದು, ಈ ಬಗ್ಗೆ ಆಡಿಟ್ ಆಕ್ಷೇಪಣೆಗಳಿಗೆ ಸಮಂಜಸವಾದ ಉತ್ತರವನ್ನ ನೀಡಲು ಕಷ್ಟವೆಂದು ಭಾವಿಸಿ ಇಂತಹ ವಿಭಾಗವನ್ನ ಮುಂದುವರಿಸುವ ಬಗೆಗೆ ಅಗತ್ಯ ತೀರ್ಮಾನ ತೆಗೆದುಕೊಳ್ಳಲು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಿ ಅಗತ್ಯ ನಿರ್ದೇಶನ ಕೋರಿದೆ.

ಕುಲಸಚಿವರು

ಕುಲಪತಿಗಳು

ತೀರ್ಮಾನ : 2018–19ರ ಶೈಕ್ಷಣಿಕ ವರ್ಷದಲ್ಲಿ ತೆಲಗು ವಿಭಾಗದ ಬಿ.ಎ ಕೋರ್ಸಿನ ಪ್ರವೇಶಾತಿಯು ಶೂನ್ಯವಾಗಿರುವುದನ್ನು ಪರಿಗಣಿಸಿ, ವಿಭಾಗವನ್ನು ಮುಂದುವರಿಸುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗುತ್ತಿದೆ. ತತ್ಸಂಬಂಧ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ತೆಲಗು ವಿಭಾಗವನ್ನು ಸ್ಥಗಿತಗೊಳಿಸಬೇಕೆಂದು ಹಾಗೂ ಆ ವಿಭಾಗದ ಅಧ್ಯಕ್ಷರಾದ ಡಾ.ರಾಮನಾಥನ್ ನಾಯ್ಡು ಇವರನ್ನು ಯಾವುದಾದರು ಪ್ರಾದೇಶಿಕ ಕೇಂದ್ರದ ನಿರ್ದೇಶಕರಾಗಿ ನಿಯೋಜನೆ ಮಾಡಲು ನಿರ್ಣಯಿಸಲಾಯಿತು.

---

ವಿಷಯ ಸಂಖ್ಯೆ : 51:12

ವಿಷಯ : ಕರಾಮುವಿಯಲ್ಲಿನ ಎಲ್.ಎಲ್.ಎಂ. ಕೋರ್ಸಿಗೆ ಮಾನ್ಯತೆ ಪಡೆಯಲು ಯು.ಜಿ.ಸಿ ಗೆ ಮೇಲ್ಮನವಿಯನ್ನು ಮಾಡಿದ್ದರೂ ಸಹ ಮಾನ್ಯತೆ ನಿರಾಕರಣೆಯಾಗಿರುತ್ತದೆ. ಆದರೆ, ಈ ಕೋರ್ಸನ್ನು ನಿರ್ವಹಿಸಲು ವಿಭಾಗವೊಂದಿದ್ದು, ಆ ವಿಭಾಗದಲ್ಲಿ ಡಾ.ಜಾನ್ಹವಿ, ಸಹಾಯಕ ಪ್ರಾಧ್ಯಾಪಕರು, ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಮಾನ್ಯತೆ ಇಲ್ಲದ ಕೋರ್ಸು ಮತ್ತು ವಿಭಾಗದ ನಿರ್ವಹಣೆಯಿಂದ ವಿಶ್ವವಿದ್ಯಾನಿಲಯಕ್ಕೆ ಅಧಿಕ ಆರ್ಥಿಕ ಹೊರೆಯಾಗುತ್ತಿದೆ. ಯಾವುದೇ ಶೈಕ್ಷಣಿಕ ಚಟುವಟಿಕೆ ಇಲ್ಲದಿರುವುದರಿಂದ ಆಡಿಟ್ ಆಕ್ಷೇಪಣೆಯು ಸಹಜವಾಗಿ ಬರಲಿದ್ದು, ಅದಕ್ಕೆ ಸಮಂಜಸವಾದ ಉತ್ತರವನ್ನ ವಿವಿಯು ಕೊಡುವುದು ಕಷ್ಟವಾಗುತ್ತಿದೆ. ತತ್ಸಂಬಂಧ ಸಮಸ್ಯೆಯನ್ನು ಬಗೆಹರಿಸಲು ವಿವಿಯ ಕಾನೂನು ವಿಭಾಗವನ್ನು ಸ್ಥಗಿತಗೊಳಿಸಿ ಆ ವಿಭಾಗದ ಅಧ್ಯಕ್ಷರನ್ನು ವಿಶ್ವವಿದ್ಯಾನಿಲಯದ ಇನ್ನಿತರೆ ಅಧ್ಯಯನ ವಿಭಾಗಗಳ ಕಾನೂನಿನ ವಿಷಯದ ಕಾರ್ಯಭಾರವನ್ನು ನಿರ್ವಹಿಸಬಹುದು. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಿದ್ದು, ಸೂಕ್ತ ನಿರ್ದೇಶನ ಕೋರಿದೆ.

ತೀರ್ಮಾನ: ಕರಾಮುವಿಯಲ್ಲಿನ ಕಾನೂನು ವಿಭಾಗದ ಎಲ್.ಎಲ್.ಎಂ. ಕೋರ್ಸಿಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಯು.ಜಿ.ಸಿ) ಕ್ಕೆ ಮೇಲ್ಮನವಿ ಸಲ್ಲಿಸಿದ್ದರೂ ಮಾನ್ಯತೆ ಸಿಗದಿರುವುದನ್ನು ಶೈಕ್ಷಣಿಕ ಮಂಡಳಿಯು ಗಮನಿಸಿ ಎಲ್.ಎಲ್.ಎಂ ಕೋರ್ಸ್‌ಗೆ ಮಾನ್ಯತೆ ಸಿಗುವವರೆವಿಗೂ ಮತ್ತು ಆ ವಿಭಾಗದ ಅಧ್ಯಕ್ಷರಾದ ಡಾ.ಜಾನ್ಹವಿ ಇವರನ್ನು ಕಾನೂನು ವಿಷಯ (ರಾಜ್ಯಶಾಸ್ತ್ರ/ಸಾರ್ವಜನಿಕ ಆಡಳಿತ/ಎಂ.ಬಿ.ಎ) ಗಳಿರುವ ವಿಭಾಗದ ಕಾರ್ಯಭಾರವನ್ನು ನಿರ್ವಹಿಸುವಂತೆ ಕ್ರಮಕೈಗೊಳ್ಳಲು ಸಭೆಯು ನಿರ್ಣಯಿಸಿತು.

---

ಅಂತಿಮವಾಗಿ 51ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸೂಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

1-4/3/5

ಕುಲಪತಿಗಳು ಹಾಗೂ ಅಧ್ಯಕ್ಷರು